ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ಸಂ:ವಿಪತ್ತು ನಿರ್ವಹಣೆ:ಕೋವಿಡ್–19:ಸಿಆರ್–1/2020–21 ದಿನಾಂಕ:02–05–2020

**: ಪತ್ರಿಕಾ ಪ್ರಕಟಣೆಗಾಗಿ ::**

ಕೋವಿಡ್–19 ರೋಗ ತಡೆ ಹಿನ್ನಲೆಯಲ್ಲಿ ದೇಶಾದ್ಯಂತ ಲಾಕ್‌ಡೌನ್ ಜಾರಿಯಲ್ಲಿದ್ದು, ಈ ಸಂದರ್ಭದಲ್ಲಿ ಅನ್ಯ ರಾಜ್ಯದ ಕಾರ್ಮಿಕರು, ಯಾತ್ರಿಗಳು, ಪ್ರವಾಸಿಗರು, ವಿದ್ಯಾರ್ಥಿಗಳು ಹಾಗೂ ಇತರೆಯವರು ಸಿಲುಕಿಹಾಕಿಕೊಂಡಿದ್ದು, ಅಂತಹವರುಗಳನ್ನು ಅವರ ಸ್ವಂತ ಸ್ಥಳಕ್ಕೆ ಕಳುಹಿಸಿಕೊಡಲು ಕೇಂದ್ರ ಗೃಹ ಮಂತ್ರಾಲಯದ ಸಂಖ್ಯೆ 40–3/2020–ಡಿಎಂ–1(ಎ) ದಿನಾಂಕ:29–4–2020ರ ಆದೇಶದಲ್ಲಿ ಅವಕಾಶ ನೀಡಲಾಗಿರುತ್ತದೆ.

ಲಾಕ್‌ಡೌನ್‌ನಿಂದಾಗಿ ಜಿಲ್ಲೆ/ತಾಲ್ಲೂಕಿಗೆ ಭೇಟಿ ನೀಡಿದಂತಹ ಅನ್ಯ ರಾಜ್ಯದ ಕಾರ್ಮಿಕರು, ಯಾತ್ರಿಗಳು, ಪ್ರವಾಸಿಗರು, ವಿದ್ಯಾರ್ಥಿಗಳು ಹಾಗೂ ಇತರೆಯವರು ಉಳಿದುಕೊಂಡಿದ್ದು, ಅಂತಹವರುಗಳು ತಮ್ಮ ಸ್ವಂತ ಸ್ಥಳಕ್ಕೆ ಹೋಗಲು ಇಚ್ಚಿಸಿದಲ್ಲಿ ವಿವರಗಳನ್ನು ಕರ್ನಾಟಕ ಸರ್ಕಾರದ **"ಸೇವಾಸಿಂಧು"** ವೆಬ್ ಪೋರ್ಟಲ್‌ನಲ್ಲಿ **(https://sevasindhu.karnataka.gov.in)** ವಿವರಗಳನ್ನು ನಮೂದಿಸಲು ಅವಕಾಶ ನೀಡಲಾಗಿರುತ್ತದೆ. ಆಸಕ್ತರು ವೈದ್ಯಕೀಯ ಪರೀಕ್ಷೆಗೆ ಒಳಪಟ್ಟಿರುವ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಅವಶ್ಯಕತೆ ಉಳ್ಳವರು ಇದರ ಸದುಪಯೋಗಪಡಿಸಿಕೊಳ್ಳಬಹುದಾಗಿರುತ್ತದೆ.

(ಆರ್.ವಿನೋತ್ ಪ್ರಿಯಾ)
ಜಿಲ್ಲಾಧಿಕಾರಿಗಳು
ಚಿತ್ರದುರ್ಗ ಜಿಲ್ಲೆ

ಇವರಿಗೆ:–
ಜಿಲ್ಲಾ ವಾರ್ತಾ & ಪ್ರಚಾರಾಧಿಕಾರಿಗಳು
ಚಿತ್ರದುರ್ಗ

ಪ್ರತಿಯನ್ನು:–

1) ಜಿಲ್ಲಾ ಪೋಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ
3) ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್‌ಗಳಿಗೆ

Scanned by CamScanner